ಐದು ದಶಕಗಳಿಗಿಂತಲೂ ಹೆಚ್ಚು ಕಾಲದಿಂದ ಬರೆಯುತ್ತಿರುವ ಹಿರಿಯ ಕಥೆಗಾರ್ತಿ, ಕಾದಂಬರಿಗಾರ್ತಿ ಜಿ.ಎಸ್. ಸುಶೀಲಾದೇವಿ ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಗುಂಜಿಗನೂರಿನವರು. ಪ್ರಸ್ತುತ ದಾವಣಗೆರೆ ನಿವಾಸಿ. 'ಷೋಕೇಸಿನ ಗೊಂಬೆ', 'ಬದುಕ ಮನ್ನಿಸು ಪ್ರಭುವೆ', 'ಅಪರಿಮಿತ', 'ಕಿಟ್ಟು ಪುಟ್ಟಿಯರ ಸಾಹಸಗಳು', 'ತುಂಗಉತ್ತುಂಗ', 'ತಿರುಗುಬಾಣ' ಅವರ ಕೆಲವು ಕೃತಿಗಳು.

ಕೊಡಿಸಿತಂತೆ. ಗಂಡನನ್ನು ಮೂಲೆಗೊತ್ತರಿಸಿ ತಾನೇ ನಿಂತು ಸಾಗುವಳಿ ಮಾಡಿಸಿ ತನ್ನ ಮಕ್ಕಳಿಗೆ ಬದುಕು ಕೊಟ್ಟಳಂತೆ. ಆಕೆ ಆವೇಶದಿಂದ ತನ್ನ ಬದುಕಿನ ಕಥೆ ಹೇಳಿದಾಗ ಕಾತ್ಯಾಯಿನಿ ಮೆಚ್ಚಿಕೊಂಡಿದ್ದಳು. ಅಂತಹ ಇಬ್ಬರು ಅಜ್ಜಿಯರೇ ತನಗೆ ಬದುಕು ಕೊಟ್ಟವರು. ನಾಳೆ ಅವರಿಬ್ಬರೂ ಬರ್ತಿದ್ದಾರೆ, ನಾಳೆ ನನ್ನ ರಿಜಿಸ್ಟರ್ ಲಗ್ನಕ್ಕೆ ಸಹಿ ಹಾಕ್ತಾರೆ, ಅದಕ್ಕಿಂತ ಹೆಚ್ಚಿನದು ಇನ್ನೇನು ಬೇಕು? ಕಾತ್ಯಾಯಿನಿ ಖುಷಿಯಾದಳು.

ತನ್ನ ಓದು ಮುಗಿದು ಒಳ್ಳೆಯ ಕಂಪನಿಯಲ್ಲಿ ಕೆಲಸ ಸಿಕ್ಕಿ, ಕೈ ತುಂಬ ಸಂಬಳ ಬರತೊಡಗಿದಾಗ ಆಕೆ ಸ್ವತಂತ್ರಳಾಗಿದ್ದಳು. ಅಮ್ಮನ ಅನಾದರ, ತನ್ನ ಅನಾಥ ಬದುಕು, ಇಬ್ಬರು ಅಜ್ಜಿಯರ ನೋವಿನ ಬದುಕು ಎಲ್ಲ ನೋಡಿದ ತನಗೆ ಯಾರ ಬಂಧನವೂ ಇಲ್ಲದ ಬದುಕು ಬೇಕು ಅನ್ನಿಸಿಬಿಟ್ಟಿತ್ತು. ಲಗ್ನವೆಂದರೆ ಕೈಗೆ ಕೋಳ ಹಾಕಿದಂತೆ, ಯಾರೋ ಬಂದು ಗಂಡನೆಂದು ಅಧಿಕಾರ ಚಲಾಯಿಸಿ ತಾನು ಗುಲಾಮಳಂತೆ ಬದುಕಬೇಕೇಕೆ? ಲಗ್ನವಾದ ಹೆಣ್ಣು ಅಸಹಾಯಕಳಾಗುತ್ತಾಳೆ. ಅವಳ ದೇಹ, ಹಣ, ಮನಸ್ಸು ಯಾವುದೂ ಅವಳದಾಗಿ ಉಳಿಯೋದಿಲ್ಲ ಎಂಬ ಧರಿತ್ರಿಯ ವಾದ ಸರಿ ಎನ್ನಿಸಿತ್ತು. ಹಾಗಾಗಿ ತಾನು ಲಗ್ನದ ಬಂಧನವನ್ನು ತಿರಸ್ಕರಿಸಿದ್ದಳು.

ಲಗ್ನವೇ ಬೇಡ, ಒಲಿದವನೊಡನೆ ಸಹಜೀವನ ಸರಿ. ಇಲ್ಲವಾದರೆ, ಯಾವ ಹಂಗೂ ಇಲ್ಲದೆ ದೂರ ಸರಿದರಾಯಿತು. ತನ್ನ ಜೊತೆಯ ಧರಿತ್ರಿ, ಜ್ಯೋತ್ಸ್ನಾ, ಲಾಸ್ಯ, ಕತ್ರೀನಾ ಎಲ್ಲರೂ ತನ್ನಂತೆಯೇ 'ಲಿವಿಂಗ್ ಟು ಗೆದರ್' ಬದುಕನ್ನೇ ಆರಿಸಿಕೊಂಡವರು. ಲಗ್ನವಾಗಿದ್ದ ಮೀರಾ, ಶ್ರದ್ಧಾ, ವಿಭಾರಿಗೆ ಆಫೀಸ್ ಕೆಲಸದ ನಂತರ ಮನೆಯಲ್ಲೂ ದುಡಿತ, ಎಲ್ಲ ಹೊಣೆ ಹೊರಲಾರದೆ ಅವರು ಸೋಲುತ್ತಿದ್ದರೆ, ತಮ್ಮದು ಹಾಯಾದ ಬದುಕು ಎನಿಸುತ್ತಿತ್ತು. ಜಂಜಾಟವಿಲ್ಲದ ಬದುಕು ಖುಷಿಕೊಟ್ಟಿತ್ತು.

ಆಗ ತನ್ನ ಬದುಕಿಗೆ ಬಂದವ ಬಿಜಾಪುರದ ಪ್ರಭುದೇವ. ರಸಿಕ, ಮಾತುಗಾರ. ಕುಡಿತ, ಪಾರ್ಟಿ, ತಿರುಗಾಟ, ಪ್ರವಾಸ, ಶಾಪಿಂಗ್ ಎಂದೆಲ್ಲಾ ಸಂಬಳದ ಹಣವನ್ನು ಯಾವ ಹೊಣೆಯೂ ಇಲ್ಲದೆ ಖರ್ಚು ಮಾಡುವ ಸುಖ. ಪ್ರಭುದೇವನೂ ಅವಳಂತೆಯೇ ಮೋಜಿನ ಬದುಕಿಗೆ ಖುಷಿಪಟ್ಟವ, ಆರೇ ತಿಂಗಳಲ್ಲಿ ಆತ ಊರಿಗೆಂದು ಹೋದವ ಅಪ್ಪ, ಅಮ್ಮ ಹೇಳಿದ ಹುಡುಗಿಗೆ ತಾಳಿಕಟ್ಟಿ ಮನೆಮಾಡಿ ಏನೂ ಅರಿಯದವನಂತೆ ಸಂಸಾರ ನಡೆಸತೊಡಗಿದ. ಇವಳಿಗೊಂದು ಮಾತೂ ಹೇಳದೆ ದೂರವಾದ.

ನಂತರ ಬಂದವ ಸಂಜೀವ ಪೂಜಾರಿ. ನಿಜಕ್ಕೂ ಬದುಕು ಚಂದವಿತ್ತು, ತಾನೂ ಖುಷಿಯಾಗಿದ್ದಳು. ಸಂಜೀವ ಅವಳೊಡನೆ ಪ್ರೀತಿಯಿಂದಿದ್ದ, ಸಂಜೀವನ ಹುಟ್ಟುಹಬ್ಬಕ್ಕೆ ಚಂದದ ಉಡುಗೊರೆ ತಂದಿಟ್ಟು ಸಿಹಿಅಡಿಗೆ ಮಾಡಿ ಕಾದಿದ್ದಳು, ಆತ ಬರಲೇ ಇಲ್ಲ. ಮರುದಿನ ಸಂಜೆ ಬಂದವ, 'ನಿನ್ನೆ ನನ್ನೂರಿನ ಮೀರಾ ಮನೇಲಿ ಮೀನಿನ ಊಟವಿತ್ತು' ಹೋಗಿದ್ದೆ ಎಂದ. 'ನಾ ಕಾದಿದ್ದೆ, ಸಿಹಿ ಅಡುಗೆ ಮಾಡಿದ್ದೆ, ಉಡುಗೊರೆ ತಂದಿಟ್ಟು ಕಾದೆ, ಫೋನ್ ಮಾಡಿದರೂ ಎತ್ತಲಿಲ್ಲ, ನನಗೇಕೆ ಹೇಳಲಿಲ್ಲ' ಎಂದವಳು ರೇಗಿದರೆ, 'ಯಾಕೆ ಹೇಳಬೇಕು? ನೀನೇನು ನನ್ನ ಹೆಂಡತಿಯೇ?' ಎಂದ. ಕಪಾಳಕ್ಕೆ ಒದ್ದಂತಾಗಿ ಅವಳು ನಾಲ್ಕಾರು ದಿನ ಮೌನವಾಗಿದ್ದಳು. ಅವನೇ ತಗ್ಗಿ ಪುನಃ ಒಂದಾದರು, ಬದುಕು ಖುಷಿಯಾಗಿತ್ತು.

ಒಮ್ಮೆ ತಲೆನೋವೆಂದು ರಜೆ ಹಾಕಿ ಮನೆಯತ್ತ ಬರುತ್ತಿದ್ದಳು. ಮನೆಯ ಮುಂದೆ ಫೋನ್ ಮಾಡುತ್ತಿದ್ದ ಸಂಜೀವ ಕಾಣಿಸಿದ, ತಾನು ಮರೆಯಾಗಿ ನಿಂತಿದ್ದಳು. 'ಇಲ್ಲ ಕಣೋ ನಾನು ಶಾಲಿನೀನೇ ಲಗ್ನ ಆಗೋದು, ಆಕೆ ನನ್ನ ಜೀವ, ಅವಳ ಓದು ಮುಗೀಲಿ ಅಂತ ಕಾದಿದ್ದೀನಿ. ಅಲ್ಲೀವರೆಗೆ ಯಾಕೆ ಉಪವಾಸ ಇರಬೇಕು ಅಂತ ಈ ಲಿವಿಂಗ್ ಟು ಗೆದರ್ ಸಂಬಂಧ ಅಷ್ಟೇ. ಥೂ, ಇಂತಾ ಹೆಣ್ಣನ್ನು ಲಗ್ನ ಆಗ್ತಾರೆಯಾ? ಪಾರ್ಟಿ, ಮೋಜು, ಮಜ